Original Article
ISSN (Online): 2582-7472

ShodhKosh: Journal of Visual and Performing Arts
July-December 2023 4(2), 4746–4750

# BASAVARAJ KATTIMANI'S NOVEL ON THE VOLCANO CLASS CONFLICT IN THE NOVEL

## ಬಸವರಾಜ ಕಟ್ಟೀಮನಿ ಅವರ ಜ್ವಾಲಾಮುಖಿಯ ಮೇಲೆ ಕಾದಂಬರಿಯಲ್ಲಿ ವರ್ಗ ಸಂಘರ್ಷ

Dr. Bharati Sangappa Gaddi [1]

[1] Associate Professor, Kannada Dept, KLE S S M S COLLEGE, ATHANI

## ABSTRACT

**English:** On the volcano is a renowned work of progressive literature. A work that captures the exploitation of labor, the background of the protest - its birth, its quantitative growth, the dynamic form of the conflict as much as possible. The way in which the Congressman Chandranna, who was a Gandhian, transformed into a communist is also the development of the conflict.
Class conflict is not an individual action and protest but has to emerge in its own law. Its background, foreground, and dynamics are all written in the structure here. Even after independence, the majority of Hindustan did not get economic 'freedom'. Their legacy of hardship is not gone. He (Chandranna) believed that the goal of the Congress was to establish a state of farmers and laborers. He had decided that he would work with the workers to achieve that goal. But when he saw the group of selfish people who had recently joined the Congress organization, he was not without suspicion. Profit-seeking traders, black marketeers, miserly people who preyed on the poor for money, and unworthy people who were greedy for power, were infiltrating the Congress organization in droves. The Congress, which was supposed to be a refuge for the poor, was becoming a haven for thieves and robbers' (page 53).
This is the atmosphere of the rulers.

**Hindi:** ಜ್ವಾಲಾಮುಖಿಯ ಮೇಲೆ ಪ್ರಗತಿಶೀಲ ಸಾಹಿತ್ಯದ ಒಂದು ಹೆಸರಾಂತ ಕೃತಿ. ಕಾರ್ಮಿಕ ಶೋಷಣೆ, ಪ್ರತಿಭಟನೆಯ ಹಿನ್ನೆಲೆ - ಹುಟ್ಟು, ಅದರ ಪರಿಮಾಣಾತ್ಮಕ ಬೆಳವಣಿಗೆ, ಸಂಘರ್ಷದ ಕ್ರಿಯಾರೂಪವನ್ನು ಸಾಧ್ಯಂತರವಾಗಿ ಸೆರೆ ಹಿಡಿದ ಕೃತಿ. ಗಾಂಧಿವಾದಿಯಾಗಿದ್ದ ಕಾಂಗ್ರೆಸಿಗ ಚಂದ್ರಣ್ಣ ಸಾಮ್ಯವಾದಿಯಾಗಿ ಪರಿವರ್ತನೆಯಾಗುವ ಬಗೆ ಸಂಘರ್ಷದ ಬೆಳವಣಿಗೆ ಸಹ ಆಗಿದೆ.
ವರ್ಗ ಸಂಘರ್ಷವೆನ್ನುವುದು ಒಂದು ವೈಯಕ್ತಿಕ ಕ್ರಿಯೆ ಮತ್ತು ಪ್ರತಿಭಟನೆಯಾಗಿರದೆ ಅದರದೇ ಆದ ನಿಯಮದಲ್ಲಿ ಮೂಡಿಬರಬೇಕಾಗುತ್ತದೆ. ಅದರ ಹಿನ್ನೆಲೆ, ಮುನ್ನೆಲೆ, ಚಲನಶೀಲತೆ ಇವೆಲ್ಲ ಇಲ್ಲಿಯ ರಚನೆಯಲ್ಲಿ ಪಡಿಮೂಡಿದೆ. ಸ್ವಾತಂತ್ರ್ಯ ಬಂದರೂ ಹಿಂದೂಸ್ಥಾನದ ಬಹುಸಂಖ್ಯಾತರಿಗೆ ಆರ್ಥಿಕ ' ಸ್ವಾತಂತ್ರ್ಯ ಲಭಿಸಲಿಲ್ಲ. ಅವರ ಕಷ್ಟಪರಂಪರೆ ದೂರವಾಗಿಲ್ಲ. ರೈತ-ಕೂಲಿಕಾರರ ರಾಜ್ಯ ಸ್ಥಾಪಿಸುವುದೇ ಕಾಂಗ್ರೆಸ್ಸಿನ ಗುರಿಯೆಂದು ಆತ (ಚಂದ್ರಣ್ಣ) ನಂಬಿದ್ದ. ಆ ಗುರಿಯನ್ನು ಸಾಧಿಸಲು ಕೆಲಸ ಮಾಡುವವರೊಂದಿಗೆ ತಾನು ಸಹಕರಿಸಿ ದುಡಿಯುವುದಾಗಿ ನಿರ್ಧರಿಸಿದ್ದ. ಆದರೆ ಈಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿಕೊಂಡ ಸ್ವಾರ್ಥಿಗಳ ತಂಡವನ್ನು ವೀಕ್ಷಿಸಿದಾಗ ಆತನಿಗೆ ಶಂಕೆ ಉಂಟಾಗದಿರಲಿಲ್ಲ. ಲಾಭಕೋರರಾದ ವ್ಯಾಪಾರಿಗಳು, ಕಾಳಸಂತೆಯ ಖದೀಮರು, ಕಾಸಿಗಾಗಿ ಬಡವರನ್ನು ಸುಲಿಯುವ ಕೃಪಣರು, ಅಧಿಕಾರದಾಶೆಗಾಗಿ ಪರಿತಪಿಸುವ ಅಯೋಗ್ಯರು, ಹಿಂಡು ಹಿಂಡಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿ ನುಸುಳುತ್ತಿದ್ದರು. ಬಡವರ ಆಶ್ರಯ ಸ್ಥಾನವಾಗಬೇಕಿದ್ದ ಕಾಂಗ್ರೆಸ್ ಕಳ್ಳಕಾಕರ, ದರೋಡೆಗಾರರ ವಾಸಸ್ಥಾನವಾಗತೊಡಗಿತ್ತು' (ಪುಟ ೫೩).
ಇದು ಆಳುವವರ ವಾತಾವರಣ.

**DOI**
10.29121/shodhkosh.v4.i2.2023.5619

**Funding:** This research received no specific grant from any funding agency in the public, commercial, or not-for-profit sectors.

**Copyright:** © 2023 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

ಜ್ವಾಲಾಮುಖಿಯ ಮೇಲೆ ಪ್ರಗತಿಶೀಲ ಸಾಹಿತ್ಯದ ಒಂದು ಹೆಸರಾಂತ ಕೃತಿ. ಕಾರ್ಮಿಕ ಶೋಷಣೆ, ಪ್ರತಿಭಟನೆಯ ಹಿನ್ನೆಲೆ - ಹುಟ್ಟು, ಅದರ ಪರಿಮಾಣಾತ್ಮಕ ಬೆಳವಣಿಗೆ, ಸಂಘರ್ಷದ ಕ್ರಿಯಾರೂಪವನ್ನು ಸಾಧ್ಯಂತರವಾಗಿ ಸೆರೆ ಹಿಡಿದ ಕೃತಿ. ಗಾಂಧಿವಾದಿಯಾಗಿದ್ದ ಕಾಂಗ್ರೆಸಿಗ ಚಂದ್ರಣ್ಣ ಸಾಮ್ಯವಾದಿಯಾಗಿ ಪರಿವರ್ತನೆಯಾಗುವ ಬಗೆ ಸಂಘರ್ಷದ ಬೆಳವಣಿಗೆ ಸಹ ಆಗಿದೆ.

ವರ್ಗ ಸಂಘರ್ಷವೆನ್ನುವುದು ಒಂದು ವೈಯಕ್ತಿಕ ಕ್ರಿಯೆ ಮತ್ತು ಪ್ರತಿಭಟನೆಯಾಗಿರದೆ ಅದರದೇ ಆದ ನಿಯಮದಲ್ಲಿ ಮೂಡಿಬರಬೇಕಾಗುತ್ತದೆ. ಅದರ ಹಿನ್ನೆಲೆ, ಮುನ್ನೆಲೆ, ಚಲನಶೀಲತೆ ಇವೆಲ್ಲ ಇಲ್ಲಿಯ ರಚನೆಯಲ್ಲಿ ಪಡಿಮೂಡಿದೆ.

ಸ್ವಾತಂತ್ರ್ಯ ಬಂದರೂ ಹಿಂದೂಸ್ಥಾನದ ಬಹುಸಂಖ್ಯಾತರಿಗೆ ಆರ್ಥಿಕ ' ಸ್ವಾತಂತ್ರ್ಯ ಲಭಿಸಲಿಲ್ಲ. ಅವರ ಕಷ್ಟಪರಂಪರೆ ದೂರವಾಗಿಲ್ಲ. ರೈತ-ಕೂಲಿಕಾರರ ರಾಜ್ಯ ಸ್ಥಾಪಿಸುವುದೇ ಕಾಂಗ್ರೆಸ್ಸಿನ ಗುರಿಯೆಂದು ಆತ (ಚಂದ್ರಣ್ಣ) ನಂಬಿದ್ದ. ಆ ಗುರಿಯನ್ನು ಸಾಧಿಸಲು ಕೆಲಸ ಮಾಡುವವರೊಂದಿಗೆ ತಾನು ಸಹಕರಿಸಿ ದುಡಿಯುವುದಾಗಿ ನಿರ್ಧರಿಸಿದ್ದ. ಆದರೆ ಈಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿಕೊಂಡ ಸ್ವಾರ್ಥಿಗಳ ತಂಡವನ್ನು ವೀಕ್ಷಿಸಿದಾಗ ಆತನಿಗೆ ಶಂಕೆ ಉಂಟಾಗದಿರಲಿಲ್ಲ. ಲಾಭಕೋರರಾದ ವ್ಯಾಪಾರಿಗಳು, ಕಾಳಸಂತೆಯ ಖದೀಮರು, ಕಾಸಿಗಾಗಿ ಬಡವರನ್ನು ಸುಲಿಯುವ ಕೃಪಣರು, ಅಧಿಕಾರದಾಶೆಗಾಗಿ ಪರಿತಪಿಸುವ ಅಯೋಗ್ಯರು, ಹಿಂಡು ಹಿಂಡಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿ ನುಸುಳುತ್ತಿದ್ದರು. ಬಡವರ ಆಶ್ರಯ ಸ್ಥಾನವಾಗಬೇಕಿದ್ದ ಕಾಂಗ್ರೆಸ್ ಕಳ್ಳಕಾಕರ, ದರೋಡೆಗಾರರ ವಾಸಸ್ಥಾನವಾಗತೊಡಗಿತ್ತು' (ಪುಟ ೫೩).

**ಇದು ಆಳುವವರ ವಾತಾವರಣ.**

ಚಂದ್ರಣ್ಣ, ಸಿದ್ಧಪ್ಪನ ಕಾರಿನ ಅಪಘಾತದಲ್ಲಿ ಸಿಕ್ಕ ಮುದುಕಿಯನ್ನು ಜಟಕಾಗಾಡಿಯ ಮೇಲೆ ಹಾಕಿಕೊಂಡು ಅವರ ಗುಡಿಸಲಿನತ್ತ ಹೋಗುವಾಗ ಜಟಕಾಸಾಬಿ ಹೇಳುವ ಮಾತುಗಳು ಬಡವರ ಸ್ಥಿತಿಯನ್ನು ಚಿತ್ರಿಸುತ್ತದೆ.

"ನಗರಸಭೆ? ಈ ಕೂಲಿಕಾರರು ಪಾಪ, ಇಲೆಕ್ಷನ್ನಿಗೆ ಹೇಗೆ ನಿಂತಾರು? ಹೊಟ್ಟೆ ತುಂಬಿಸಿಕೊಳ್ಳೋದೆ ಅವರಿಗೆ ದೊಡ್ಡ ಕೆಲಸವಾಗಿರುವಾಗ ಮೆಂಬರು ಆಗಲು ಯಾರಿಗೆ ಮನಸ್ಸು ಬಂದೀತು ಸ್ವಾಮಿ ?" (108).

ಬಡವರಿಗೆ, ಕೂಲಿಕಾರರಿಗೆ ಹಣ-ಹೆಂಡಗಳಲ್ಲಿ ಸೆರೆಯಾದ ಚುನಾವಣೆಯಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಆಗುವುದಿಲ್ಲ. ಹೀಗೆ ಇದ್ದರೂ ಸಹ ವರ್ಗ ಹೋರಾಟ ಸಂಭವಿಸುವುದು ಹಿಂದೆ ಹೇಳಿದಂತೆ ವೈರಿವರ್ಗಗಳು ನಿರ್ಮಾಣವಾದಾಗ, ಅಂಥ ಸ್ಥಿತಿ ಧರ್ಮಾಪುರದ ಕಾರಖಾನೆಯಲ್ಲಿ ಸಂಭವಿಸುತ್ತದೆ. ಅದರ ಪೂರ್ಣಚಿತ್ರ ಇಲ್ಲಿ ಸಿಕ್ಕುತ್ತದೆ.

“ಇಲ್ಲಿಯ ಗಿರಣಿ ಕೂಲಿಕಾರರ ಮೇಲೆ ಮಾಲಿಕರು ಭೀಕರ ದಬ್ಬಾಳಿಕೆ ನಡೆಸಿದ್ದಾರೆ. ನೂರಾರೂ ಜನರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ದಿನವೊಂದಕ್ಕೆ ಪ್ರತಿಯೊಬ್ಬ ಮನುಷ್ಯನಿಗೆ ಕೇವಲ ಎಂಟುತಾಸು ಮಾತ್ರ ಕೆಲಸವಿರಬೇಕೆಂಬ ನಿಯಮವಿದ್ದರೂ ಅಲ್ಲಿ ಎಲ್ಲರೂ ಹತ್ತು-ಹನ್ನೆರಡು ತಾಸು ಕೆಲಸ ಮಾಡಬೇಕಾಗಿದೆ. ಈ ಅನ್ಯಾಯದ ವಿರುದ್ಧ ದನಿ ಎತ್ತಿದವರನ್ನೆಲ್ಲ ಕೆಲಸದಿಂದ ತೆಗೆದುಬಿಡಲಾಗುತ್ತದೆ. ಸರಕಾರ ಇದನ್ನೆಲ್ಲ ನೋಡುತ್ತ ತೆಪ್ಪಗೆ ಕುಳಿತಿರುವುದು ಮಾತ್ರವಲ್ಲ, ಧರ್ಮಪುರದ ಪೋಲಿಸರಿಂದ ಮಾಲಿಕರಿಗೆ ಎಲ್ಲ ವಿಧದ ನೆರವೂ ದೊರೆಯುತ್ತದೆ' (೬೩).

ಎಂಟು ತಾಸು ಕೆಲಸ ಮಾಡುವುದು ನಿಯಮ. ಈ ಕೆಲಸಕ್ಕೆ ಅವರಿಗೆ ಕೂಲಿ ನಿಶ್ಚಯಿಸುವಾಗ ಕೂಲಿಕಾರನ ಕನಿಷ್ಠ ಅವಶ್ಯಕತೆ (ಮನೆ-ಆಹಾರ, ಕುಟುಂಬ ಇತ್ಯಾದಿಗಳನ್ನು) ಗಣನೆಗೆ ತೆಗೆದುಕೊಳ್ಳಗಾಗುತ್ತದೆ. ಹಾಗೆ ಆಗುವ ಉತ್ಪನ್ನ ಈ ಕೂಲಿಯನ್ನು ಹೋಗಲಾಡಿಸಿ ಯಂತ್ರಗಳ ಸವಕಳಿ, ಆಡಳಿತ ವರ್ಗದ ಖರ್ಚು, ಕಾರಖಾನೆಯ ಖಾಯಂನಿಧಿ, ಮಾಲಿಕರ ಲಾಭ (ಈ ಲಾಭಕೂಡ ಮಾಲಿಕರ ಮನೆ, ಅಂತಸ್ತು, ಕುಟುಂಬ ಇತ್ಯಾದಿಗಳನ್ನು ಪರಿಗಣಿಸಿ) ವನ್ನೊಳಗೊಂಡಿರುತ್ತದೆ. ಆದರೆ ಎಂಟು ತಾಸು ಬದಲು ಹನ್ನೆರಡು ತಾಸು ದುಡಿದಾಗ ಕಾರ್ಮಿಕರ ನಾಲ್ಕು ತಾಸಿನ ಶ್ರಮ ನಿಷ್ಫಳವಾಗಿ ನೇರ ಮಾಲಿಕರ ಕೈಗೆ ಹೋಗುತ್ತದೆ. ಇದಕ್ಕೆ ಮಿಗುತೆಯ ಮೌಲ್ಯ (ಸರ್‌ಪ್ಲಸ್ ವೆಲ್ಯು) ಎಂದು ಕರೆಯುತ್ತಾರೆ. ಆದರೆ ಹೀಗೆ ದೊರಕಿಸಿದ ಮೌಲ್ಯದಲ್ಲಿ ಕಾರ್ಮಿಕರಿಗೆ ಯಾವ ಲಾಭವೂ ಸಿಕ್ಕುವುದಿಲ್ಲ. ಇದು ಮಾತ್ರವಲ್ಲ, ಇಂಥ ಮಿಗುತೆಯ ಮೌಲ್ಯ ಕಾರ್ಮಿಕರು ಎಂಟುತಾಸು ಕೆಲಸ ಮಾಡಿದಾಗಲೂ ಸಿಕ್ಕುತ್ತದೆ. ಅದನ್ನೇನು ಕಾರ್ಮಿಕ ವರ್ಗವನ್ನು ಕೂಡಿಸಿಕೊಂಡು ವೈಜ್ಞಾನಿಕವಾಗಿ ನಿಶ್ಚಯ ಮಾಡಿರುವುದಿಲ್ಲ. ಒಂದು ವೇಳೆ ಮಾಡಿದರೂ ಕಾರ್ಮಿಕರಿಗೆ ಒದಗಿಸಬೇಕಾದ ಸೌಲಭ್ಯವನ್ನು ಒದಗಿಸದೇ ದಕ್ಕಿಸಲಾಗುತ್ತದೆ. ಅದಕ್ಕೆ ಸಾಕ್ಷಿಯಾಗಿ ಇಲ್ಲಿ ಕಾರ್ಮಿಕರ ವಸತಿಯ ವರ್ಣನೆ ಬಂದಿದೆ.

“ಸೂರ್ಯಾಸ್ತವಾದುದಕ್ಕೆ ಅರ್ಧಗಂಟೆ ಕಳೆದು ಹೋಗಿತ್ತು. ಮೆಲ್ಲಮೆಲ್ಲನೆ ಕತ್ತಲೆ ಪಸರಿಸುತ್ತಿತ್ತು. ಊರಿನ ಹೊರಗಡೆ ವಿಸ್ತೀರ್ಣವೊಂದಕ್ಕೆ ಹೊಂದಿಕೊಂಡು ಬೆಳೆದಿದ್ದ ಆ ಕೂಲಿಕಾರರ ವಸತಿಯಲ್ಲಿ ನಗರ ಸಭೆ ವಿದ್ಯುದ್ದೀಪವನ್ನೇರ್ಪಡಿಸಿದಂತೆ ತೋರುತ್ತಿರಲಿಲ್ಲ. ಧರ್ಮಪುರದ ಬೀದಿಗಳನ್ನು ಚೌಕಗಳನ್ನು ಬೆಳಗುತ್ತಿದ್ದ ದೀಪಗಳ ಸುಳಿವು ಸಹ ಇರಲಿಲ್ಲ. ಇಲ್ಲಿ ನಗರದ ಬೀದಿಗಳಿದ್ದಂತೆ ಆ ವಸತಿಯ ಬೀದಿಗಳಿಗೆ ಡಾಂಬರಿನ ಸಂಪರ್ಕವೂ ಇರಲಿಲ್ಲ” (೧೦೭).

ಧರ್ಮಪುರದ ಚರಂಡಿಗಳ ಹೊಲಸನ್ನೆಲ್ಲ ತೆಗೆದುಕೊಂಡು ದೂರ ದೂರ ಸಾಗಿಸುವ ದೊಡ್ಡ ಚರಂಡಿ ಈ ವಸತಿಯ ಸಮೀಪ, ಈ ಕತ್ತಲಲ್ಲಿ ಕಾಣಿಸೋದಿಲ್ಲ. ಹಗಲು ಹೊತ್ತು ಒಂದು ಕಣ್ಣು ಮುಚ್ಚಿಕೊಂಡೀರಿ ನೀವು. ಅಂಥ ಹೊಲಸು ತುಂಬಿಕೊಂಡಿದೆ. ನಗರದ ಕೊಳೆಯೆಲ್ಲ ಹರಿದುಬರೋದು ಬೇರೆ. ಕೂಲಿಕಾರರ ವಸತಿಯ ಮಲ-ಮೂತ್ರ ಬೇರೆ. ಇನ್ನು ವಾಸನೆ ಬಡಿಯದಿದ್ದೀತೆ ? (೧೦೯).

ಈ ರೀತಿ ಕಾರ್ಮಿಕ ಶೋಷಣೆ ಮಾಲೀಕರಿಂದ ಮತ್ತು ಅವರ ಪರವಾದ ಸರಕಾರದಿಂದಲೂ ನಡೆಯುತ್ತದೆ.

ಹಳ್ಳಿಯಿಂದ ಕಾರ್ಮಿಕರು ಸಹ ನಗರಕ್ಕೆ ಬರುತ್ತಾರೆ. ಬಾಲಕಾರ್ಮಿಕರೂ ಬರುತ್ತಾರೆ. ನಗರದಲ್ಲಿ ದುಡಿದು ಹಳ್ಳಿಯ ತಂದೆ-ತಾಯಿಗಳಿಗೆ ಸಹಾಯ ಮಾಡುವ ಮನಸ್ಸು ಅವರದ್ದು.

ಹಳ್ಳಿಯಲ್ಲಿ ಬಡತನಕ್ಕೆ ಸಾಲ ಮಾಡಿ ಜಮೀನು ಕಳೆದುಕೊಂಡ ಬಡರೈತರೂ ನಗರಕ್ಕೆ ಕೆಲಸ ಅರಸಿ ಬರುತ್ತಾರೆ. ಗಿರಣಿಗಳು ಬೆಳೆದಂತೆ ಅವರಿಗೆ ಕೆಲಸ ಸಿಕ್ಕುತ್ತದೆ. ಕೆಲಸದಾಶೆಗೆ ಗುಳೆ ಎದ್ದು ಬರುವ ಹಳ್ಳಿಯ ಕೂಲಿಕಾರರನ್ನು ಕಡಿಮೆ ಕೂಲಿಗೆ ದುಡಿಸಿಕೊಂಡು ಕೊಬ್ಬಲು ಮಾಲಿಕರಿಗೆ ಅವಕಾಶ ತೆರೆದಿರುತ್ತದೆ. ಬಾಲಕಾರ್ಮಿಕರು, ಮಹಿಳೆಯರಿಗೆ ಇನ್ನೂ ಕಡಿಮೆ ಕೂಲಿ, ಹೆಚ್ಚು ದುಡಿತ. ಹೀಗೆ ಬಂದ ಬಾಲಕಾರ್ಮಿಕರಲ್ಲಿ ಒಬ್ಬ ಮಲ್ಲೇಶಿ. ಮಾಲಿಕರ ವೈರಿವರ್ಗ ಒಂದೆಡೆ ಕೂಡುತ್ತದೆ ಮತ್ತು ಬೆಳೆಯುತ್ತದೆ. ಕಾರ್ಮಿಕರಲ್ಲಿ ವರ್ಗಪ್ರಜ್ಞೆ ಬೆಳೆಯುತ್ತದೆ. ಹಾಗೆ ಬೆಳೆಯಬೇಕಾದರೆ ಮಧ್ಯಮವರ್ಗದ ಬುದ್ಧಿಜೀವಿಗಳ ನೆರವು, ನೇತೃತ್ವ ದೊರಕಬೇಕು. ಅದರಂತೆ ರಾಜಕೀಯ ಪ್ರೇರಣೆ ಬೆಳೆಯಬೇಕು. ಇದನ್ನು ಬೆಳೆಸುವ ಪಕ್ಷವೆಂದರೆ ಕಮ್ಯುನಿಸ್ಟ ಪಕ್ಷ. ಇತರ ಪಕ್ಷ ಮತ್ತು ಸಂಘಟನೆಗಳುರಾಜಿಮನೋಭಾವದಿದ್ದು ಮತ್ತು ಮಾಲಿಕ-ಕಾರ್ಮಿಕರ ಮಧ್ಯೆ ತೇಪೆ ಹಾಕುವ ಕೆಲಸವನ್ನು ಮಾತ್ರ ಮಾಡುತ್ತವೆ. ಅವು ಸಂಪೂರ್ಣವಾಗಿ ವರ್ಗರಹಿತ ಸಮಾಜದ ಪರಿಕಲ್ಪನೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುವುದಿಲ್ಲ. ಆದ್ದರಿಂದ ಕಾರ್ಮಿಕ ಸಂಘ (ಧರ್ಮಪುರದ್ದು) ಕೆಂಬಾವುಟದ ಅಡಿ ಬರುತ್ತದೆ.

ಹೀಗೆ ವರ್ಗ ಪ್ರಜ್ಞೆ (ಇದು ರಾಜಕೀಯ ಪ್ರಜ್ಞೆಯೇ) ಬೆಳೆದಾಗ ಅದು ಧರ್ಮ-ಜಾತಿಗಳ ಪ್ರಭಾವವನ್ನು ಮೀರುತ್ತದೆ. ಇಂದ್ರಣ್ಣ ಒಮ್ಮೆ ಜಟಕಾಸಾಬಿಯನ್ನು ಕಾರ್ಮಿಕ ವಸತಿಯಲ್ಲಿ ಹಿಂದೂ-ಮುಸ್ಲಿಂ ಗಲಭೆಗಳಿಲ್ಲವೆ ? ಎಂದು ಹೇಳಿದಾಗ ಜಟಕಾಸಾಬಿ ಕೊಡುವ ಉತ್ತರ ಹೀಗೆ:

"ಬೆಳಗಿನಿಂದ ಸಂಜೆಯವರೆಗೆ ಹೊಟ್ಟೆಯ ತಂಟೆಯೇ ನಡೆದಿರುವಾಗ ಇನ್ನು ನಾನು ಹಿಂದು, ನಾನು ಮುಸ್ಲಿಂ ಎಂಬ ತಂಟೆ ಎಲ್ಲಿಂದ ಬಂದೀತು ಸಾಮೀ ? ಉಂಡುಟ್ಟು ಸುಖವಾಗಿ ತಿರುಗಾಡುತ್ತ ಮಾಡಲು ಬೇರೆ ಉದ್ಯೋಗ ಇಲ್ಲದವರ ಕೆಲಸ ಅದೆಲ್ಲ. ಇಲ್ಲಿರುವವರೆಲ್ಲ ಬಡವರು. ನಮ್ಮಲ್ಲಿ ಈ ಜಗಳವೇ ಬರುವಂತಿಲ್ಲ" (೧೦೯).

ಕಾರ್ಮಿಕರ ಮೇಲೆ ನಡೆಯುವ ದೌರ್ಜನ್ಯದಲ್ಲಿ ಹಿಂದು-ಮುಸ್ಲಿಂ ಇರುವುದಿಲ್ಲ. ಮಾಲಿಕರು ಬೇರೆಬೇರೆ ಧರ್ಮದವರಾದರೂ ಅವರು ಒಂದು ವರ್ಗದಲ್ಲಿ ಜಾಗೃತರಾಗಿರುತ್ತಾರೆ. ಒಕ್ಕಟ್ಟಾಗಿರುತ್ತಾರೆ. ಹಾಗೆಯೇ ಕೂಲಿಕಾರವರ್ಗ, ಅದರ ಅನುಭವವೇ ಅವರನ್ನು ಹಾಗೆ ಮಾಡುತ್ತದೆ. ಕಾರ್ಮಿಕ ಸೋಮಣ್ಣ ಹೇಳುತ್ತಾನೆ:

"ನಾನು ನಿಮ್ಮ ಹಾಗೆ ಕಲಿತವನಲ್ಲ. ಅಭ್ಯಾಸ ಮಾಡಿದವನಲ್ಲ. ಕನ್ನಡದಲ್ಲಿ ಬಂದಿರುವ ಕೆಲವು ಪುಸ್ತಕ ಓದಿಕೊಂಡಿದ್ದೇನೆ. ಕಮ್ಯುನಿಜಂ ಅಂದರೇನು ಎನ್ನುವುದನ್ನು ನಾನು ಹೇಳಲಾರೆನಾದರೂ ಇಷ್ಟು ಮಾತ್ರ ಗೊತ್ತು. ಕಮ್ಯುನಿಸಂ ಬಂದಾಗ ನಮ್ಮಂಥವರ ಗೋಳು ಇಲ್ಲವಾಗುತ್ತೆ. ದುಡಿದು ತಿನ್ನುವವರ ರಾಜ್ಯ ಬರುತ್ತೆ. ನಮ್ಮ ಬೆವರು, ನಮ್ಮ ದುಡಿತದಿಂದ ಲಾಭಮಾಡಿಕೊಂಡು ಶ್ರೀಮಂತರು ಏನೂ ಕೆಲಸ ಮಾಡದೆ ಸೋಮಾರಿಗಳಾಗಿ ಬಿದ್ದುಕೊಂಡು ನಮ್ಮ ಮೇಲೆ ದಬ್ಬಾಳಿಕೆ ನಡೆಸೋದು ನಿಂತು ಹೊಗುತ್ತೆ. ನಮ್ಮ ಮೇಲಿನ ಅನ್ಯಾಯ ದೂರವಾಗುತ್ತೆ. ಇಷ್ಟಾದರೆ ಸಾಲದೆ ಚಂದ್ರಣ್ಣ ?” (೧೩೧).

ಈ ಪ್ರಜ್ಞೆ ಪರಿಪೂರ್ಣ ಇಲ್ಲದಿರಬಹುದು. ಆದರೆ ಅದು ಬೆಳೆಯುತ್ತ, ಸೈದ್ಧಾಂತಿಕ ಅರಿವಿನೊಂದಿಗೆ ಬಲಿಯುತ್ತ ಹೋಗುತ್ತದೆ. ಅಂಥ ಪ್ರಜ್ಞೆಯನ್ನು ಪಡೆದು ವರ್ಗಕಲಹದಲ್ಲಿ ತೊಡಗಬೇಕಾದುದು ಕಾರ್ಮಿಕವರ್ಗಕ್ಕೆ ಅನಿವಾರ್ಯವಾದಂತೆ ಕರ್ತವ್ಯ ಕೂಡ ಹೌದು. ಮಾರ್ಕ್ಸ ಹೇಳಿದ ಹಾಗೆ ಈ ಕಲಹದಿಂದ ಕಾರ್ಮಿಕವರ್ಗ ಕಳೆದುಕೊಳ್ಳುವುದೇನೂ ಇಲ್ಲ. ಅವರು ಕಳೆದುಕೊಳ್ಳುವುದು ಕೈಗೆ ತೊಡಿಸಿದ ಸರಪಳಿ ಮಾತ್ರ. ಅವರು ನಿಂತದ್ದು ತಳದಲ್ಲಿ. ಅಲ್ಲಿಂದ ಎದ್ದ ಪ್ರತಿಭಟನೆ ಇಡೀ ವ್ಯವಸ್ಥೆಯ ವಿರುದ್ಧ ಇರಬೇಕಾಗುತ್ತದೆ. ಅಂದರೆ ವರ್ಗಗಳ ನಿರ್ನಾಮವೇ ಆಗಿರುತ್ತದೆ. ಆದ್ದರಿಂದ ಕ್ರಾಂತಿಯನ್ನು ಜರಗಿಸುವ ಶಕ್ತಿ ಕಾರ್ಮಿಕರಿಗೆ ಮಾತ್ರ ಸಾಧ್ಯವಾಗುತ್ತದೆ. ಕಾರ್ಮಿಕ ವರ್ಗ ಕ್ರಾಂತಿಕಾರಕ ವರ್ಗವಾಗಿದೆ ಎಂಬುದು ಸಿದ್ಧಾಂತದ ಮಾತಾಗಿದೆ.

ಒಂದು ವ್ಯವಸ್ಥೆ ಬೆಳೆ ಬೆಳೆಯುತ್ತಲೇ ತನ್ನ ನಾಶದ ಬೀಜವನ್ನು ತಾನೇ ಹೊಂದಿರುತ್ತದೆ. ಮಾರ್ಕ್ಸವಾದಿ ವಿಚಾರಧಾರೆಯಲ್ಲಿ ಇದನ್ನು ನಿಷೇಧದ ನೇಷೇಧ (ನೆಗೇಶನ್ ಆಫ್ ನೆಗೇಶನ್) ಎಂದು ಕರೆಯಲಾಗುತ್ತದೆ. ಮಾರ್ಕ್ಸವಾದಿ ತತ್ವಜ್ಞಾನದಲ್ಲಿ ಚರಿತ್ರೆಯ ಮುನ್ನಡೆಯನ್ನು ಈ ರೀತಿ ದ್ವಂದ್ವಕ್ರಮದಲ್ಲಿ ಗ್ರಹಿಸಲಾಗುತ್ತದೆ. ಗುಲಾಮಗಿರಿ ವ್ಯವಸ್ಥೆಯಿಂದ ಊಳಿಗಮಾನ್ಯ ವ್ಯವಸ್ಥೆ ಬಂದುದು ಹಾಗೆ.

ಗುಲಾಮಗಿರಿಯಲ್ಲಿ ಗುಲಾಮರ ಸ್ಥಿತಿ ಅತ್ಯಂತ ದುರ್ಮ್ಮಾನಕ್ಕೊಳಗಾಗುತ್ತದೆ. ಅಂದರೆ ಗುಲಾಮರ ಒಡೆಯರ ಶೋಷಣೆ ಪ್ರಖರವಾಗುತ್ತದೆ. ಇದರಿಂದ ಗುಲಾಮರ ಒಡೆಯರಿಗೆ ಗುಲಾಮರಿಂದ ಪ್ರಯೋಜನ-ಉತ್ಪಾದನೆ-ಕಡಿಮೆಯಾಗುತ್ತದೆ. ಗುಲಾಮರ ಪ್ರತಿಭಟನೆಯೂ ಇರುತ್ತದೆ. ಆಗ ಗುಲಾಮರಿಗೇ ಸ್ವಂತಕ್ಕೆ ಭೂಮಿಯನ್ನು ಹಂಚಲಾಗುತ್ತದೆ. ಅವರ ಒಡೆಯರು ಭೂಮಾಲಿಕರಾಗುತ್ತಾರೆ. ಗುಲಾಮರು ರೈತರಾಗುತ್ತಾರೆ. ಗುಲಾಮರಿಗೆ ತುಸು ಸ್ವಾತಂತ್ರ್ಯವೂ ಸಿಕ್ಕುತ್ತದೆ. ಸಮಾಜದ ಉತ್ಪನ್ನವೂ ಹೆಚ್ಚುತ್ತದೆ. ಇಲ್ಲಿ ಉತ್ಪಾದನೆಯ ಮಾಧ್ಯಮ ರೈತವಾದಿ ಆಗಿದೆ. ಹಂಚಿಕೆ ಬೇರೆಯಾಗಿದೆ. ಆದ್ದರಿಂದ ಸಮಾಜದ ವ್ಯವಸ್ಥೆ ಬೇರೆ ಆಗುತ್ತದೆ. ಅದಕ್ಕೆ ಅನುಸರಿಸಿ ಒಡೆಯ, ಆಳು, ದೈವ-ದೇವರು, ಭಕ್ತ, ಧರ್ಮ-ಶಾಸ್ತ್ರ, ಪೂಜಾರಿ ಇತ್ಯಾದಿ ಬೆಳೆಯುತ್ತದೆ. ರಾಜರ-ಜಮೀನುದಾರರ ಮಧ್ಯೆ ಸರಂಜಾಮಿ ಸಂಬಂಧ ಬೆಳೆಯುತ್ತದೆ.

ಈ ವ್ಯವಸ್ಥೆಯಲ್ಲೂ ಬಿಕ್ಕಟ್ಟು ಉಂಟಾಗುತ್ತದೆ. ರೈತರ ಸುಲಿಗೆ ಒಂದೇ ಸವನೆ ನಡೆಯುತ್ತದೆ. ಫೆಡರಿಕ್ ಎಂಗೆಲ್ಸ್ ಇದನ್ನು ತಮ್ಮ 'ಪೆಸೆಂಟ್ ಾರ್ ಇನ್ ಜರ್ಮನಿ' ಗ್ರಂಥದಲ್ಲಿ ವಿವರವಾಗಿ ಕೋಟ್ಟಿದ್ದಾರೆ. (ನಿರಂಜನರ ಅಭ್ಯಾಸದ ಕೊನೆಗೆ ಇರುವ ಟಿಪ್ಪಣಿ ೧ರಲ್ಲಿ ವಿವರ ಇದೆ) ಹಾಗೆಯೇ ಔದ್ಯೋಗಿಕ ಬೆಳವಣಿಗೆ, ಲೇವಾದೇವಿ ವ್ಯವಹಾರ, ಸೇರೆಗಾರ ವ್ಯವಹಾರ ಬೆಳೆಯುತ್ತದೆ. ಸಾವಕಾಶ ಇದು ಬಂಡವಾಳಶಾಹಿ ಬೆಳವಣಿಗೆಗೆ ಕಾರಣವಾಗುತ್ತದೆ ಹಾಗೆಯೇ ವಿಜ್ಞಾನದ ಬೆಳವಣಿಗೆಗೆ ಬಂಡವಾಳಶಾಹಿ ಕೂಡ. ಬಂಡವಾಳಶಾಹಿ ಭೂಮಾಲಿಕ ವ್ಯವಸ್ಥೆಯನ್ನೇ ಬದಲಿಸುತ್ತದೆ. ಇಲ್ಲಿ ಬೃಹತ್ ಯಂತ್ರ ಉತ್ಪಾದನೆಯ ಮಾಧ್ಯಮವಾಗುತ್ತದೆ. ಉತ್ಪಾದನೆಯ ವಿತರಣೆಯ ರೀತಿ ಬೇರೆಯಾಗುತ್ತದೆ. ಈಗ ಸಮಾಜದ ಮೇಲೆ ಇರುವ ರಾಜಪ್ರಭುತ್ವ, ಸಂಗಡವೇ ಧರ್ಮದ ಯಾಜಮಾನ್ಯ ಕ್ಷೀಣಿಸುತ್ತದೆ. ಪ್ರತಿನಿಧಿಗಳು ಸರಕಾರ ರಚಿಸುವ ಪ್ರಜಾಪ್ರಭುತ್ವ ಜಾರಿಗೆ ಬರುತ್ತದೆ. ಇದೊಂದು ಅದ್ಭುತವಾದ ಕ್ರಾಂತಿಯೇ ಆಗಿದೆ. ಈ ಬೆಳವಣಿಗೆ ಮುಂದಿನ ಕ್ರಾಂತಿಗೆ ಹೇಗೆ ಮಾರ್ಗವಾಗುತ್ತದೆಂಬ ವಿವರಣೆ ಈಗಾಗಲೇ ಬಂದಿದೆ. ಈ ರೀತಿಯಾಗಿ ಚರಿತ್ರೆ ದ್ವಂದ್ವಮಾನದ ಸ್ವಭಾವವನ್ನು ಹೊಂದಿದೆ. ಇದನ್ನು ಮಾರ್ಕ್ಸ್ ಹೀಗೆ ವಿವರಿಸುತ್ತಾರೆ.

“ಆರ್ಥಿಕ ಅಡಿಪಾಯದಲ್ಲಿ ಉಂಟಾಗುವ ಪರಿವರ್ತನೆಗಳು ಇಂದಲ್ಲ ನಾಳೆಯಾದರೂ ಅದರ ಇಡೀ ಮೇಲಂತಸ್ತನ್ನೇ ಬದಲಾಯಿಸಲು ಕಾರಣವಾಗುತ್ತದೆ. ಆದರೆ ಯಾವುದೇ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ಪಾದನಾಶಕ್ತಿಗಳ ಬೆಳವಣಿಗೆ ಎಷ್ಟರಮಟ್ಟಿಗೆ ಸಾಧ್ಯವೊ ಅಷ್ಟರ ಮಟ್ಟವನ್ನು ತಲುಪುವ ತನಕ ಆ ವ್ಯವಸ್ಥೆ ನಾಶವಾಗಲಾರದು. ಹಾಗೆಯೇ ಉನ್ನತಮಟ್ಟದ ನೂತನ ಉತ್ಪಾದನಾ ಸಂಬಂಧಗಳ ಅಸ್ತಿತ್ವಕ್ಕೆ ಅವಶ್ಯವಾದ ಪರಿಸ್ಥಿತಿಯು ಹಳೆಯ ಸಮಾಜದ ಚೌಕಟ್ಟಿನಲ್ಲಿ ಪರಿಪಕ್ವವಾಗುವತನಕ ಅವು ಹಳೆಯ ಸಂದರ್ಭಗಳ ಸ್ಥಾನವನ್ನು ಆಕ್ರಮಿಸಲಾರವು. ಈ ವ್ಯವಸ್ಥೆಯ ಪರಿವರ್ತನೆ ಉನ್ನತವಾಗಿದ್ದು ವರ್ಗರಹಿತ ಸಮಾಜ ಸ್ಥಾಪನೆಯೊಟ್ಟಿಗೆ ಪರಿಪೂರ್ಣವಾಗುತ್ತದೆ".

ಇಂಥ ಒಂದು ಬೆಳವಣಿಗೆ ಮತ್ತು ತಾರ್ಕಿಕತೆಯನ್ನು ಕಾದಂಬರಿ ಮಂಡಿಸುತ್ತದೆ. ಹಾಗೆಯೇ ಆಶಾವಾದವನ್ನು. ಆದರೆ ಅದೇನು ಸರಳ, ಸುಲಭ ಅಲ್ಲ, "ಶಂಕರನಂಥ ಧೈಯವಾದಿ ಯುವಕರು, ದುರ್ಗಪ್ಪನಂಥಾ ನಿಷ್ಠಾವಂತ ಕೆಲಸಗಾರರು, ಇಬ್ರಾಹಿಂನಂಥ ಕಳಕಳಿಯ ಕಾರ್ಯಕರ್ತರು, ನಾಗಮ್ಮನಂಥ ಪ್ರಾಮಾಣಿಕಜೀವಿ, ಸಾವಿತ್ರಿಯಂಥ ನೊಂದ ಮಹಿಳೆ, ಸರೋಜಳಂಥ ಆದರ್ಶವಾದಿ ಯುವತಿ, ಲಕ್ಷಾವದಿ ತರುಣ, ತರುಣಿಯರು

ದುಡಿಯುತ್ತಿರುವಾಗ ಆ ದಿನ ಬರದಿರುತ್ತದೆಯೇ ?" (೩೧೯) ಎಂದು ಒಂದು ಪಾತ್ರ ಕೇಳುತ್ತದೆ. ಇಂಥ ಮನುಷ್ಯ ಪ್ರಯತ್ನ ಅದಕ್ಕೆ ಅವಶ್ಯವಾಗಿದೆ. ಕಮುನಿಸ್ಟ ಪಕ್ಷದಲ್ಲೂ ಕೆಲವರು ಶ್ರೀಮಂತರಿದ್ದಾರಲ್ಲಾ? ಎಂಬ ಚಂದ್ರಣ್ಣನ ಪ್ರಶ್ನೆಗೆ ಸೋಮಣ್ಣನ ಉತ್ತರ ಹೀಗೆ:

"ಶ್ರೀಮಂತರು ಕೆಲವರಿದ್ದಾರೆ. ಆದರೆ ಪಾರ್ಟಿಗಾಗಿ ಅವರೂ ಬಡತನವನ್ನಪ್ಪಿಕೊಂಡಿದ್ದಾರೆ. ತಮ್ಮ ಆಸ್ತಿ ಪಾಸ್ತಿಯನ್ನೆಲ್ಲ ಪಾರ್ಟಿಗೆ ಬರೆದುಕೊಟ್ಟಿದ್ದಾರೆ" (೧೩೧).

ಪಕ್ಷದಲ್ಲಿ ಅಧಿಕಾರ ಲಾಲಸೆಯನ್ನು ತಡೆಹಿಡಿಯುವ ಬಿಗಿಕ್ರಮ ಇದೆ. ಹೀಗೆಂದು ಒಪ್ಪಿಕೊಂಡಾಗಲೂ ಒಬ್ಬನನ್ನು ತಳ್ಳಿ ಇನ್ನೊಬ್ಬ ಬರಬಹುದಾದ ಸಾಧ್ಯತೆಯನ್ನು ಚಂದ್ರಣ್ಣ ಊಹಿಸುತ್ತಾನೆ. ಯಾವುದೇ ವ್ಯವಸ್ಥೆಯನ್ನು ಸಂಶಯದಿಂದಲೇ ನೋಡುವ ಮತ್ತು ಆ ಸಂಶಯ ಮನುಷ್ಯನ ಮೂಲಭೂತ ಸ್ವಾತಂತ್ರ್ಯದ ಮೇಲೆ ಆಕ್ರಮಣ ಎಸಗಬಹುದಾದ ಸಂಗತಿಗಳಿಗೆ ಸಂಬಂಧಿಸಿ ಚಂದ್ರಣ್ಣನ ಅಭಿಪ್ರಾಯದಲ್ಲಿ ಲೇಖಕರೂ ಪಾಲುಗೊಳ್ಳುವುದು ಇಲ್ಲಿ ನಿಚ್ಚಳವಾಗಿದೆ. ಆದರೂ ಇಂಡಿಯಾಕ್ಕೆ ಸಾಮ್ಯವಾದದ ಹೊರತು ಬೇರೆ ಉಪಾಯವಿಲ್ಲ ಎಂಬ ಕಡೆ ತಮ್ಮ ಗಮನ ಕೇಂದ್ರೀಕರಿಸುತ್ತಾರೆ.

"ಕಮ್ಯುನಿಸ್ಟ ಸೋಶಾಲಿಸ್ಟರಂತ ಯಾವ ಭೇದ-ಭಾವವೂ ಇಲ್ಲ ಹೇಮಣ್ಣನವರಿಗೆ, ರತ್ನಾ. ಅವರು ದಯಾವಂತರು. ನನಗೆ ಪೆಟ್ಟು ಬಿದ್ದ ಸುದ್ದಿ ತಿಳಿದಾಗ ನನ್ನನ್ನು ಮಾತಾಡಿಸಿಕೊಂಡು ಹೋದರು".

"ನಿನ್ನ ಹತ್ತಿರ ಬಂದಿದ್ದರೆ ?"

"ಹೌದು ನನ್ನ ಗಾಯ ನೋಡಿ ಕಣ್ಣಲ್ಲಿ ನೀರು ತಂದರು. ಇರಲಿ, ಇದಕ್ಕೆ ಸರಿಯಾಗಿ ಮಾಡೋಣ ಆ ಶೆಟ್ಟಿಗೆ ಎಂದರು ?"

"ಅವರೂ ಸೆಟ್ಟರೂ ಒಂದಾದುದರಿಂದಲೇ ಈ ಗತಿಯಾಯಿತು ನಮಗೆ ?"

"ಸೆಟ್ಟರು ಇವರಿಗೂ ಕೈಕೊಟ್ಟರಲ್ಲ, ರತ್ನಾ ? ಇನ್ನು ಹೇಮಾದ್ರಿ ಸುಮ್ಮನಿರುವುದಿಲ್ಲ. ಇಂಟಕ್ ಮತ್ತು ಸೆಟ್ಟರಿಗಿದಿರಾಗಿ ಬಲವಾದ ಹೋರಾಟ ಹೂಡುತ್ತಾರೆ. ಈ ಹೋರಾಟದಲ್ಲಿ ಚಂದ್ರಣ್ಣನವರಿಗೆ ತುಂಬ ಸಹಾಯವಾಗಬಹುದೆಂದು ಹೇಳುತ್ತಿದ್ದರು".

ಚಂದ್ರಣ್ಣನವರೂ ಅವರೂ ಕೂಡಿ ಪತ್ರಿಕೆಯೊಂದನ್ನು ಹೊರಡಿಸಿದರೆ ಈ ಲಫಂಗರನ್ನೆಲ್ಲ ಮಟ್ಟ ಹಾಕಬಹುದು ಅಂತ ಹೇಳುತ್ತಿದ್ದರು. ಇಂದು ಮುಂಜಾನೆಯಲ್ಲೇ ಅವರು ಚಂದ್ರಣ್ಣನನ್ನು ಬಹಳ ಹುಡುಕಿದರು(೩೪೪-೪೫).

ಈ ಸಂಭಾಷಣೆಯನ್ನು ಲೇಖಕರು ಬಹಳ ಆತ್ಮೀಯತೆಯಿಂದ ನಿರೂಪಿಸುತ್ತಾರೆ. ಚಂದ್ರಣ್ಣ ಈಗಾಗಲೇ ಸಾಮ್ಯವಾದದ ಕಡೆ ಒಲಿದವ. ಅವನೊಡನೆ ಹೇಮಾದ್ರಿಯ ಕೂಡಿಕೆಯ ಅಶಯ (ಕಮ್ಯುನಿಸ್ಟ ಮತ್ತು ಸೋಶಲಿಸ್ಟ) ಲೇಖಕರ ತಾತ್ವಿಕ ನಿಲುವನ್ನು ಸೂಚಿಸುತ್ತಾರೆ.

**ಸಮಾರೋಪ**

ಹೀಗೆ ಕನ್ನಡ ಕಾದಂಬರಿಗಳಲ್ಲಿ ಈ ಕಾದಂಬರಿ ಪ್ರಗತಿಶೀಲ ಕಾಲಘಟ್ಟದಲ್ಲಿ ಮೂಡಿಬಂದಿದೆ. ಅದರಲ್ಲೂ ವರ್ಗ ಸಂಘರ್ಷದ ನೆಲೆಯನ್ನು ಇನ್ನಷ್ಟು ವಿಸ್ತರಿಸುತ್ತದೆ. ಜೊತೆಗೆ ಅಂದಿನ ಕಮ್ಯುನಿಸ್ಟ ಮತ್ತು ಸೋಶಲಿಸ್ಟರ ನಿಲುವುಗಳನ್ನು ಸ್ಪಷ್ಟಪಡಿಸುತ್ತದೆ. ಕಾದಂಬರಿಯ ನಿಲುವು ಸಹ ಅದೇ ಆಗಿದೆ. ಬರಹಗಾರರಾದ ಬಸವರಾಜ ಕಟ್ಟೀಮನಿ ಅವರು ಅಂದಿನ ಕಮ್ಯುನಿಸ್ಟ ಮತ್ತು ಸೋಶಲಿಸ್ಟರ ಪ್ರಭಾವಕ್ಕೂ ಒಳಗಾಗಿರುವುದರ ಬಗ್ಗೆ ಈ ಕಾದಂಬರಿ ಸ್ಪಷ್ಟಪಡಿಸುತ್ತದೆ.

**ಪರಾಮರ್ಶನ ಗ್ರಂಥಗಳು**


1) ಕೃಷ್ಣರಾಯ ಅ.ನ., ಪ್ರಗತಿಶೀಲ ಸಾಹಿತ್ಯ, ಪ್ರಗತಿಶೀಲ ಲೇಖಕರ ಸಂಘ, ಧಾರವಾಡ, 1944.
2) ಬಸವರಾಜ ಕಟ್ಟಿಮನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2011
3) ಭಂಡಾರಿ ಆರ್.ವಿ., ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ (ದ.ಕ), 2003